## ವನ್ಯಜೀವಿಗಳ ಸಾವು ತಡೆಗೆ ಅರಣ್ಯ–ರೈಲ್ವೆ ಇಲಾಖೆ ಅಧಿಕಾರಿಗಳ ಸಭೆ

# ಜಂಟಿ ಕ್ರಿಯಾ ಸಮಿತಿ ರಚಿಸಲು ಒಪ್ಪಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಳಗಾವಿ ಜಿಲ್ಲೆಯ ಕಾಡಿನ ಮೂಲಕ ಸಾಗುವ ರೈಲ್ವೆ ಮಾರ್ಗದಲ್ಲಿ ವನ್ಯಜೀವಿಗಳ ಸುರಕ್ಷತೆಗಾಗಿ ಅರಣ್ಯ ಇಲಾಖೆಯೊಂದಿಗೆ ಜಂಟಿ ಕ್ರಿಯಾ ಸಮಿತಿ ರಚಿಸಲು ರೈಲ್ವೆ ಇಲಾಖೆ ಒಪ್ಪಿಗೆ ಸೂಚಿಸಿದೆ.

ಕೇವಲ ಐದು ವರ್ಷಗಳ ಅವಧಿಯಲ್ಲಿ ಇದೇ ರೈಲ್ವೆ ಮಾರ್ಗದಲ್ಲಿ ಆರು ಕಾಡುಕೋಣಗಳು ಹಾಗೂ ಒಂದು ಆನೆ ಮರಿ ಅಪಘಾತಗಳಲ್ಲಿ ಸಾವನ್ನಪ್ಪಿವೆ. ರೈಲ್ವೆ ಇಲಾಖೆ ಸುರಕ್ಷತೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂಬುದು ವನ್ಯಜೀವಿ ಕಾರ್ಯಕರ್ತರ ದೂರಾಗಿತ್ತು.

ಬೆಳಗಾವಿ ಅರಣ್ಯ ವೃತ್ತದ ಕಚೇರಿಯಲ್ಲಿ ಅರಣ್ಯ ಇಲಾಖೆ ಹಾಗೂ ನೈರುತ್ಯ ರೈಲ್ವೆಯ ಹಿರಿಯ ಅಧಿಕಾರಿಗಳು ಕಳೆದ ವಾರ ಸಭೆ ನಡೆಸಿದ್ದಾರೆ.

ಹೊಸಪೇಟೆ-ತಿನ್ನೈಘಾಟ್ ರೈಲ್ವೆ ಭಾಗದ ಅಳ್ನಾವರ-ಲೋಂಡಾ ಮಾರ್ಗದಲ್ಲಿ ವನ್ಯಜೀವಿಗಳ ಸುರಕ್ಷತೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಅರಣ್ಯ ಇಲಾಖೆಯೊಂದಿಗೆ ಜಂಟಿ ಕ್ರಿಯಾ ಸಮಿತಿ ರಚಿಸುವ ಜತೆಗೆ ವಿಸ್ತೃತವಾದ ಅಧ್ಯಯನ ನಡೆಸಲು ಅಧಿಕಾರಿಗಳು ಒಪ್ಪಿಗೆ ಸೂಚಿಸಿದ್ದಾರೆ.

ವನ್ಯಜೀವಿಗಳ ಸುರಕ್ಷತೆಗೆ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯತನ ತೋರಿದ ಆರೋಪದ ಮೇಲೆ ರೈಲ್ವೆ ಇಲಾಖೆಯ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲು ಮಾಡಲಾಗುವುದೆಂದು ವನ್ಯಜೀವಿ ಕಾರ್ಯಕರ್ತರು ಎಚ್ಚರಿಸಿದ್ದರು.

ಕೇಂದ್ರ ಪರಿಸರ ಇಲಾಖೆಯ ಕಾರ್ಯದರ್ಶಿ, ಆನೆ ಯೋಜನೆ ಹಾಗೂ ವನ್ಯಜೀವಿ ವಿಭಾಗಕ್ಕೆ ವನ್ಯಜೀವಿ ಕಾರ್ಯಕರ್ತ ಗಿರಿಧರ ಕುಲಕರ್ಣಿ ದೂರು ಸಲ್ಲಿಸಿದ್ದರು. ದೂರಿನ ಕುರಿತು ಪ್ರತಿಕ್ರಿಯಿಸಿದ್ದ ಆನೆ ಯೋಜನೆ ವಿಭಾಗದ ಅರಣ್ಯ ಮಹಾ ನಿರೀಕ್ಷಕ ಹಾಗೂ ನಿರ್ದೇಶಕ ಆರ್.ಕೆ. ಶ್ರೀವಾಸ್ತವ್ ಅವರು ರಾಜ್ಯದ ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಘಟನೆಯ ಕುರಿತಂತೆ ಆದಷ್ಟು ಬೇಗ ವರದಿ ಸಲ್ಲಿಸುವಂತೆ ತಿಳಿಸಿದ್ದರು.

ರೈಲ್ವೆ ಅಪಘಾತಗಳಲ್ಲಿ ಆನೆಗಳ ಸಾವಿನ ಕುರಿತಂತೆ ಈಗಾಗಲೇ ರಿಟ್ ಅರ್ಜಿ (107 / 2013) ಸುಪ್ರೀಂ ಕೋರ್ಟ್ ಪರಿಶೀಲನೆಯಲ್ಲಿ ಇರುವುದರಿಂದ ಘಟನೆಯ ಕುರಿತಂತೆ ತನಿಖೆ ನಡೆಸಬೇಕು ಎಂದೂ ತಿಳಿಸಿದ್ದರು.

ನೈರುತ್ಯ ರೈಲ್ವೆ ವಿಭಾಗದವರು ಈಗಾಗಲೇ ಹೊಸಪೇಟೆ-ತಿನ್ನೈಘಾಟ್ ರೈಲ್ವೆ ಮಾರ್ಗದ ದ್ವಿಪಥ ಕಾಮಗಾರಿಯನ್ನು ಆರಂಭಿಸಿದ್ದು ಈ ಮಾರ್ಗದಲ್ಲೇ ವನ್ಯಜೀವಿಗಳು ಮೃತಪಟ್ಟಿವೆ. ಅಲ್ಲದೇ ಈ ಯೋಜನೆಯ ಮುಂದಿನ ಭಾಗವಾಗಿ ತಿನ್ನೈಘಾಟ್-ಕ್ಯಾಸಲ್‌ರಾಕ್ ಮತ್ತು ಕ್ಯಾಸಲ್‌ರಾಕ್-ಕುಲೆಮ್ ಮಧ್ಯೆ ದ್ವಿಪಥ ಕಾಮಗಾರಿಯನ್ನು ನಡೆಸಲು ಅರಣ್ಯ ಇಲಾಖೆಗೆ ಹೊಸದಾಗಿ ಪ್ರಸ್ತಾವ ಸಲ್ಲಿಸಲಾಗಿದೆ.

‘ವನ್ಯಜೀವಿಗಳ ಪಾಲಿಗೆ ಮೃತ್ಯುಕೂಪವಾಗಿರುವ ಹೊಸಪೇಟೆ-ತಿನ್ನೈಘಾಟ್ ರೈಲ್ವೆ ಮಾರ್ಗದ ದ್ವಿಪಥ ಕಾಮಗಾರಿ ಈಗಾಗಲೇ ಪ್ರಗತಿಯಲ್ಲಿದೆ. ಆದರೆ ಪರಿಸರ ಹಾಗೂ ವನ್ಯಜೀವಿಗಳ ಹಿತದೃಷ್ಟಿಯಿಂದ ತಿನ್ನೈಘಾಟ್-ಕ್ಯಾಸಲ್‌ರಾಕ್ ಮತ್ತು ಕ್ಯಾಸಲ್‌ರಾಕ್-ಕುಲೆಮ್ ಮಧ್ಯೆ ದ್ವಿಪಥ ಕಾಮಗಾರಿಗೆ ಅರಣ್ಯ ಇಲಾಖೆ ಒಪ್ಪಿಗೆ ನೀಡಬಾರದು ಎಂದು ವನ್ಯಜೀವಿ ಕಾರ್ಯಕರ್ತರು ಆಗ್ರಹಿಸಿದ್ದಾರೆ.